## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ

## CC No.589-2024

**(ಇಂದು ದಿಃ 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಸಿದ್ದು | CW-7 | PW-6 |
|---|---|---|---|
| ತಂದೆ/ಗಂಡನ ಹೆಸರು | ಖಾಜಾ ನಾಯಕ | | |
| ವಯಸ್ಸು | 25 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಜಾಕನಪಲ್ಲಿ ತಾಲ್ಲೂಕು ಸೇಡಂ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ತಾಯಿ. ಚಾಸಾ-3 ರಿಂದ 5 ನಮ್ಮ ಪರಿಚಯದವರು. ಆರೋಪಿಗಳು ನನಗೆ ಗೊತ್ತು. ಸುಮಾರು 3 – 4 ವರ್ಷಗಳಳ ಹಿಂದೆ ಆರೋಪಗಳು ಮತ್ತು ಚಾಸ-1 ರ ನಡುವೆ ಹಣದ ವಿಷಯವಾಗಿ ಜಗಳವಾಗಿತ್ತು ಕಾರಣ ಸಂಜೆ ಚಾಸ-1 ಜಮೀನಿನಿಂದ ಬುರುತ್ತಿರುವಾಗ ಆರೋಪಿಗಳು ಅವರನ್ನು ತಡೆದು ನಿಲ್ಲಿಸಿ ಜೀವ ಬೇಧರಿಕೆ ಹಾಕಿದರು ಮತ್ತು ಅವಾಚ್ಯ ಶಬ್ದಗಳಿಂದ ಬೈದರು. ನಾನು ಈ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಶ್ರೀ GPR ವಕೀಲರಿಂದಃ**

ಗಲಾಟೆ ಆಗುವಾಗ ನಾನು ಸ್ಥಳದಲ್ಲಿ ಇರಲಿಲ್ಲ. ಆರೋಪಿಗಳು ನಮ್ಮ ಗ್ರಾಮದಲ್ಲಿ ಇರುವುದಿಲ್ಲ, ಮುಂಬೈನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿಗಳು ಮತ್ತು ನಮ್ಮ ನಡುವೆ ದ್ವೇಷ ಇದೆ ಎಂದರೆಸರಿಯಲ್ಲ, ಆರೋಪಿಗೂ ಮತ್ತು ಚಾಸ-1 ರ ನಡುವೆ ಗಲಾಟೆ ಆಗಿತ್ತು, ಆರೊಪಿಗಳು ಚಾಸಾ-1 ರವರನ್ನು ತೆಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೇಧರಿಕೆ

ಹಾಕಿದರು ಎಂದರೆ ಸರಿಯಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸ-1 ನನ್ನ ತಂದೆ ಆಗಿರುವ ಕಾರಣ ಅವರಿಗೆ ಸಹಾಯ ಆಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**